ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ನಸೀರ್ ಅಹ್ಮದ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2427

ಉತ್ತರಿಸಬೇಕಾದ ದಿನಾಂಕ : 30.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಬಂಡವಾಳ ಎಷ್ಟು; ಸದರಿ ಬ್ಯಾಂಕಿನ ಯಾವ ಯಾವ ಲೆಕ್ಕ ಶೀರ್ಷಿಕೆಯಡಿ ಎಷ್ಟೆಷ್ಟು ಮೊತ್ತವಿದೆ; (ಲೆಕ್ಕ ಶೀರ್ಷಿಕೆವಾರು ಮಾಹಿತಿ ಒದಗಿಸುವುದು)	1. ಅಧಿಕೃತ ಷೇರು ಬಂಡವಾಳ ರೂ.1000/- ಮೌಲ್ಯದ 10 ಲಕ್ಷ ಷೇರುಗಳು ರೂ.100,00,00,000-00 2. **ಪಾವತಿಯಾದ ಷೇರು ಬಂಡವಾಳ:** **(ರೂ.ಲಕ್ಷಗಳಲ್ಲಿ)** ಎ - ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭೀವೃದ್ಧಿ ಬ್ಯಾಂಕುಗಳಿಂದ - 80,70,78,000 ಬಿ - ಪ್ರಾಥಮಿಕ ಬ್ಯಾಂಕುಗಳಿಂದ ಭೂ ಸುಧಾರಣೆ ಯೋಜನೆಯಡಿ - 37,73,300 ಸಿ - ಸಹ ಸದಸ್ಯರುಗಳಿಂದ - 4,100 ಡಿ - ರಾಜ್ಯ ಸರ್ಕಾರದಿಂದ(ಎಲ್.ಟಿ.ಓ) - 1,20,00,000 3. **ದುಡಿಯುವ ಬಂಡವಾಳ** :- (ರೂ.ಲಕ್ಷಗಳಲ್ಲಿ) 2,18,101.36
ಆ	ಸದರಿ ಬ್ಯಾಂಕು ಹೊಂದಿರುವ ಸ್ವಂತ ಆಸ್ತಿ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)	ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು ರಾಜ್ಯಾದ್ಯಂತ ಒಟ್ಟು 25 ಶಾಖಾ ಕಛೇರಿಗಳನ್ನು ಹೊಂದಿದ್ದು, ಇದರಲ್ಲಿ ಚಿತ್ರದುರ್ಗ, ಉಡುಪಿ, ಹಾವೇರಿ, ಚಿಕ್ಕಮಗಳೂರು, ದಾವಣಗೆರೆ, ಕೊಪ್ಪಳ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಖಾಲಿ ನಿವೇಶನಗಳನ್ನು ಹೊಂದಿದ್ದು, ಅದರ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. ಅಲ್ಲದೇ ಮಂಡ್ಯ, ಮಡಿಕೇರಿ, ಶಿರಸಿ, ಬೆಳಗಾವಿ, ಧಾರವಾಡ, ಶಿವಮೊಗ್ಗ, ತುಮಕೂರು, ಕೋಲಾರ, ಬೀದರ್, ಬಳ್ಳಾರಿ, ಹಾಸನ, ಬಾಗಲಕೋಟೆ, ವಿಜಯಪುರ, ರಾಯಚೂರು ಹಾಗೂ ಕಲಬುರ್ಗಿ ಜಿಲ್ಲೆಗಳಲ್ಲಿ ಸ್ವಂತ ನಿವೇಶನದಲ್ಲಿ ಶಾಖಾ ಕಟ್ಟಡಗಳನ್ನು ಹೊಂದಿದ್ದು, ಅದರ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.
ಇ	ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಮೈಸೂರು ಶಾಖಾ ಕಛೇರಿಯ ಕಟ್ಟಡವನ್ನು ಲೋಕೋಪಯೋಗಿ ಇಲಾಖೆ ಹಾಗೂ ಮೈಸೂರು ಮಹಾನಗರ ಪಾಲಿಕೆಯ ಅನುಮತಿ ಪಡೆಯದೇ ಕಾನೂನು ಬಾಹಿರವಾಗಿ ಒಡೆದು ಹಾಕಿ ನಿವೇಶನದ ಸಾಮಗ್ರಿಗಳನ್ನು ವಿಲೇವಾರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ರೀತಿ ಕಾನೂನು ಬಾಹಿರವಾಗಿ ಕಛೇರಿ ಕಟ್ಟಡವನ್ನು ಒಡೆದು ಹಾಕಲು	ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಮೈಸೂರು ಶಾಖಾ ಕಛೇರಿಯ ಕಟ್ಟಡವನ್ನು ಕೆಡವಲು ದಿನಾಂಕ:13/12/2017ರ ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನಿಸಿದಂತೆ, ಸಹಕಾರ ಸಂಘಗಳ ನಿಬಂಧಕರಿಗೆ ಪತ್ರ ಬರೆದಿದ್ದು, ಜಿಲ್ಲಾ ವ್ಯವಸ್ಥಾಪಕರು ಶಾಖಾ ಕಛೇರಿ ಮೈಸೂರು ಇವರು ದಿನಾಂಕ:23/04/2018, ಮೈ.ಶಾಖೆ/16/2018-19 ರ ಮೂಲಕ ಕಟ್ಟಡ ಶಿಥಿಲಗೊಂಡಿರುವ ಬಗ್ಗೆ ತಾಂತ್ರಿಕ ದೃಢೀಕರಣ ನೀಡಲು ಲೋಕೋಪಯೋಗಿ ಇಲಾಖೆಗೆ ಕೋರಿರುತ್ತಾರೆ. ಸಹಕಾರ ಸಂಘಗಳ ನಿಬಂಧಕರು

	ತೀರ್ಮಾನಿಸಿದವರು ಯಾರು; ಇವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು;	ದಿನಾಂಕ:09/08/2018ರಂದು, ಆರ್‌ಸಿಎಸ್/ಎಲ್‌ಡಿಬಿ/ ವಿಲೇವಾರಿ/53/2017-18 ಪತ್ರದಂತೆ, ಕಟ್ಟಡವನ್ನು ಒಡೆದು ಅದರಿಂದ ಬರುವಂತಹ ಸಾಮಗ್ರಿಗಳನ್ನು ವಿಲೇವಾರಿ ಮಾಡಲು ಅನುಮತಿ ನೀಡಿರುತ್ತಾರೆ. ಹಾಗೂ ಮೈಸೂರು ಮಹಾನಗರ ಪಾಲಿಕೆಯು ಸಹ ದಿನಾಂಕ:14/06/2018, ಮೈನಪಾ/ವ.ಕ-06/15/18-19 ಪತ್ರದಂತೆ, ಶಿಥಿಲವಾಗಿರುವ ಕಟ್ಟಡವನ್ನು ಕೆಡವಲು ಅನುಮತಿ ನೀಡಿರುತ್ತಾರೆ. **(ಅನುಬಂಧ-02(ಎ)** ರಲ್ಲಿ ನೀಡಲಾಗಿದೆ) ಹಾಗೂ ಇದರಲ್ಲಿರುವ ಸಾಮಗ್ರಿಗಳ ವಿಲೇವಾರಿಗೆ ಸಂಬಂಧಿಸಿದಂತೆ, ನಿಯಮಾನುಸಾರ 4 ದರಪಟ್ಟಿಗಳನ್ನು ತರಿಸಿ, ಜಿಲ್ಲಾ ನಿರ್ದೇಶಕರ ಸಮ್ಮುಖದಲ್ಲಿ ಹೆಚ್ಚಿನ ದರ ರೂ.4,50,170/- ಗಳನ್ನು ನಮೂದಿಸಿದ ಶ್ರೀ. ಇನಾಯತ್ ಪಾಷಾ ಇವರಿಂದ ರೂ.3,00,000/-ಗಳನ್ನು ಭದ್ರತಾ ಠೇವಣಿಯಾಗಿ ಪಡೆದು ಕಾರ್ಯಾದೇಶ ನೀಡಲಾಗಿದೆ.
ಈ	ರಾಜ್ಯಾದ್ಯಂತ ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಶಾಖೆಗಳ ಸಂಖ್ಯೆ ಎಷ್ಟು; ಕೇಂದ್ರ ಕಛೇರಿ ಹಾಗೂ ಶಾಖಾ ಕಛೇರಿಗಳು ಸೇರಿದಂತೆ ಸದರಿ ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಇವರುಗಳಲ್ಲಿ ಎರವಲು ಸೇವೆಯ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಂಖ್ಯೆ ಎಷ್ಟು; (ಶಾಖಾವಾರು ಮಾಹಿತಿ ಒದಗಿಸುವುದು)	ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ 25 ಶಾಖೆಗಳಲ್ಲಿ ಹಾಗೂ ಕೇಂದ್ರ ಕಛೇರಿಯಲ್ಲಿ ದಿ:01.03.2021 ರ ಅಂತ್ಯಕ್ಕೆ 266 ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಇದರ ಜೊತೆಗೆ ಎರವಲು ಸೇವೆಯ ಮೇಲೆ 4 ಜನ ಅಧಿಕಾರಿಗಳು ಸೇವೆ ಸಲ್ಲಿಸುತ್ತಿದ್ದು, ಒಬ್ಬರು ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು, ಒಬ್ಬರು ಬ್ಯಾಂಕಿನ ಕಾರ್ಯದರ್ಶಿ ಮತ್ತು ಇಬ್ಬರು ಆಂತರಿಕ ಲೆಕ್ಕ ಪರಿಶೋಧಕರು ಸೇವೆ ಸಲ್ಲಿಸುತ್ತಿರುತ್ತಾರೆ. ಒಟ್ಟು 270 ಜನ ಕಾರ್ಯ ನಿರ್ವಹಿಸುತ್ತಿದ್ದಾರೆ.
ಉ	ಕೆಲವು ಶಾಖೆ ಕಛೇರಿಯಲ್ಲಿ ಅಗತ್ಯಕ್ಕಿಂತ ಹೆಚ್ಚು ಸಿಬ್ಬಂದಿಗಳು ಇರುವುದು ಹಾಗೂ ಕೆಲವು ಶಾಖಾ ಕಛೇರಿಗಳಲ್ಲಿ ಸಿಬ್ಬಂದಿಗಳ ಕೊರತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದಲ್ಲಿ ಈ ಸಂಬಂಧ ಸರ್ಕಾರ ಕೈಗೊಳ್ಳುವ ಕ್ರಮವೇನು;	ಶಾಖಾ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ಪಟ್ಟಿಯನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ ಹಾಗೂ ಜಿಲ್ಲೆಯ ಶಾಖಾ ಕಛೇರಿಗಳಲ್ಲಿ ಅಗತ್ಯತೆಗನುಗುಣವಾಗಿ ಅಧಿಕಾರಿ/ಸಿಬ್ಬಂದಿಗಳನ್ನು ಶಾಖೆಗಳಿಗೆ ನಿಯೋಜಿಸಲಾಗುತ್ತಿದೆ.
ಊ	ಯಾವ ಯಾವ ವಿಷಯಗಳ ಮೇಲೆ ಎಷ್ಟು ಅಧಿಕಾರಿ/ನೌಕರರುಗಳ ವಿರುದ್ಧ ವಿಚಾರಣೆ ನಡೆಸಲಾಗುತ್ತಿದೆ; ವಿಚಾರಣೆಗಳು ಯಾವ ಹಂತದಲ್ಲಿವೆ; ದೋಷಾರೋಪಣೆ ಹೊರಡಿಸಿರುವ/ ದೋಷಿತ ಅಧಿಕಾರಿ/ನೌಕರರುಗಳ ವಿರುದ್ದ ಯಾವ ಕ್ರಮ ಕೈಗೊಳ್ಳಲಾಗಿದೆ; (ಶಾಖಾವಾರು ಮಾಹಿತಿ ಒದಗಿಸುವುದು)	ಅನಧಿಕೃತ ಗೈರು ಹಾಜರಿ/ಕರ್ತವ್ಯ ಲೋಪ ಇತರೇ ವಿಷಯಗಳಿಗೆ ಸಂಬಂಧಿಸಿದಂತೆ ಶ್ರೀ ಕಾಮಂತ್ ಎಸ್ ನಾಯ್ಕ, ಅಭಿವೃದ್ಧಿ ಅಧಿಕಾರಿ ಇವರ ಮೇಲೆ ಬೆಂಗಳೂರು, ತುಮಕೂರು ಮತ್ತು ರಾಯಚೂರು ಶಾಖೆಗಳ 3 ವಿಚಾರಣಾ ಪ್ರಕರಣಗಳು, ಶ್ರೀ ಬಿ.ಜಿ.ಕೊಟ್ರೇಶಪ್ಪ, ಮಾಜಿ ಜಿಲ್ಲಾ ವ್ಯವಸ್ಥಾಪಕರು, ತುಮಕೂರು ಶಾಖೆ, ಶ್ರೀಮತಿ ಎನ್.ಕೆ.ಅನುಪಮಾ, ಅಭಿವೃದ್ಧಿ ಅಧಿಕಾರಿ, ತುಮಕೂರು ಶಾಖೆ, ಶ್ರೀ ವಜೀಹುದ್ದೀನ್, ಜವಾನರು, ಕಲಬುರ್ಗಿ ಶಾಖೆ ಇವರ ಮೇಲಿನ ಒಟ್ಟು 6 ವಿಚಾರಣೆಯ ಪ್ರಕರಣಗಳ ವಿವರಗಳನ್ನು **ಅನುಬಂಧ-4** ರಲ್ಲಿ ನೀಡಲಾಗಿದೆ.

ಖ	ಕೇಂದ್ರ ಕಛೇರಿ ಸೇರಿದಂತೆ ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ವಿವಿಧ ಶಾಖೆಗಳಿಗೆ ಮಂಜೂರಾದ ಹುದ್ದೆಗಳಲ್ಲಿ ಭರ್ತಿ ಮಾಡಿಕೊಳ್ಳದಿರುವ ಹುದ್ದೆಗಳ ಸಂಖ್ಯೆ ಎಷ್ಟು; ಭರ್ತಿ ಮಾಡಿಕೊಳ್ಳದಿರಲು ಕಾರಣವೇನು; ಯಾವ ಕಾಲ ಮಿತಿಯೊಳಗೆ ಭರ್ತಿ ಮಾಡಿಕೊಳ್ಳಲು ಕ್ರಮವಹಿಸಲಾಗುವುದು?	ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ವಿವಿಧ ಶಾಖೆಗಳಿಗೆ ಮಂಜೂರಾದ ಹುದ್ದೆಗಳ ಸಂಖ್ಯೆ 485 ಈ ಪೈಕಿ ದಿನಾಂಕ 01.03.2021 ರ ಅಂತ್ಯಕ್ಕೆ 266 ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದು 219 ಹುದ್ದೆಗಳು ಭರ್ತಿ ಮಾಡಲು ಬಾಕಿ ಇದ್ದು, ಈ ಪೈಕಿ ನಿಯಮಾನುಸಾರ ಶೆ.60 ರಷ್ಟು ಹಾಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿ ಸಿಬ್ಬಂದಿಗಳಿಗೆ ಮುಂಬಡ್ತಿಗೆ ಪರಿಗಣಿಸಿ ಉಳಿಕೆ ಶೇ.40 ರಷ್ಟು ಅಧಿಕಾರಿ/ಸಿಬ್ಬಂದಿಗಳನ್ನು ಕಾಲಕಾಲಕ್ಕೆ ಬ್ಯಾಂಕಿನ ಆರ್ಥಿಕ ಸ್ಥಿತಿಗನುಗುಣವಾಗಿ ಭರ್ತಿ ಮಾಡಿಕೊಳ್ಳಲು ಕ್ರಮವಹಿಸಲಾಗುವುದು.

ಸಂಖ್ಯೆ: ಸಿಒ 235 ಸಿಎಲ್‌ಎಸ್ 2021

(ಎಸ್.ಟಿ ಸೋಮಶೇಖರ್)

ಸಹಕಾರ ಸಚಿವರು

ಅನುಬಂಧ-01

ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ.

ಸ್ವಂತ ನಿವೇಶನ ಹೊಂದಿರುವ ವಿವರ.

ಕ್ರಸಂ	ಜಿಲ್ಲೆಗಳ ಹೆಸರು	ನಿವೇಶನ ವಿವರ	ಮಂಜೂರಾತಿ ಪ್ರಾಧಿಕಾರ
01	ಚಿತ್ರದುರ್ಗ	ಸಿ.ಎ.ಸೈಟ್-2(ಬಿ)ಕೆಳಗೋಟೆ ಎರಡನೇ ಹಂತಚಿತ್ರದುರ್ಗ12.50x33.00=142.50 ಚದರ ಮೀಟರ್ ಮಂಜೂರಾತಿ ದಿನಾಂಕ: 17-07-02	ಕರ್ನಾಟಕ ಗೃಹ ಮಂಡಳಿ
02	ಉಡುಪಿ	ಸಿ.ಎ.ಸೈಟ್-2 ಕೆ.ಹೆಚ್.ಬಿ.ಕಾಲೋನಿ, ದೊಡ್ಡನಗುಡ್ಡೆ ಉಡುಪಿ.44.00x26.00=1144ಚ.ಮೀ ಮಂಜೂರಾತಿ ದಿನಾಂಕ:04.09.2008	ಕರ್ನಾಟಕ ಗೃಹ ಮಂಡಳಿ
03	ಹಾವೇರಿ	ಯಲ್ಲಾಪುರಗ್ರಾಮ ರಿ.ಸಂ.ನಂ.35 ಬಿ ಪ್ಲಾಟ್-31 18.06 ಗುಂಟೆ(1862.41 ಚ.ಮೀ) ಮಂಜೂರಾತಿ ದಿನಾಂಕ:08.09.2008	ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರ
04	ಚಿಕ್ಕಮಗಳೂರು	ಹಿರೇಮಗಳೂರು ಬಡಾವಣೆ 3ನೆ ಹಂತ ನಿವೇಶನ ಸಂಖ್ಯೆ: ಂ-181,ಂ-182,212-ಬಿ 213-ಬಿ,214-ಬಿ,40x60-3 ನಿವೇಶನ 50x80-2 ನಿವೇಶನ ಕ್ರಯ ಪತ್ರದ ದಿನಾಂಕ:24.06.96	ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
05	ದಾವಣಗೆರೆ	ನಿಟ್ಟುವಳ್ಳಿ ಗ್ರಾಮ ರಿ.ಸ.ನಂ.39/1ಬಿ,1ಸಿ,1ಡಿ,1046.25 ಚದರ ಮೀಟರ್‌ಗುತ್ತಿಗೆ ಪತ್ರ 1.09.07	ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ
06	ಕೊಪ್ಪಳ	ಕೊಪ್ಪಳ ರಿ.ಸಂ.150/7 ನಿವೇಶನ ಸಂಖ್ಯೆ:53 620 ಚ.ಮೀ	ನಗರಾಭಿವೃದ್ಧಿ ಪ್ರಾಧಿಕಾರ ಕೊಪ್ಪಳ
07	ಮೈಸೂರು	ನಂ.6, ಬಾಂಬೆ ಹೌಸ್, ವಿನೋಬ ರಸ್ತೆ ಮೈಸೂರು 4788.18 ಚ. ಮೀ., 12/11/1975 ರಲ್ಲಿಕ್ರಯ	---

ಉಪ ಮುಖ್ಯ ವ್ಯವಸ್ಥಾಪಕರು(ಸಾ.ಆ.ವಿಭಾಗ)

ಅನುಬಂಧ-02

ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ.,

ಶಾಖಾ ಕಛೇರಿಗಳ ಸ್ವಂತ ಕಟ್ಟಡ ಹೊಂದಿರುವ ವಿವರ.

ಕ್ರಸಂ	ಜಿಲ್ಲೆಗಳ ಹೆಸರು	ನಿವೇಶನ ಸಂಖ್ಯೆ	ನಿವೇಶನದ ವಿಸ್ತೀರ್ಣ	ಕಟ್ಟಡದ ವಿಸ್ತೀರ್ಣ
01	ಮಂಡ್ಯ	ಆ3/127/1587/1588ಎ	825.58 ಚ.ಮೀ	560 ಚ.ಮೀ
02	ಮಡಿಕೇರಿ	390/13	223.25 ಚ.ಮೀ	512.37 ಚ.ಮೀ
03	ಶಿರಸಿ	116 ಪ್ಲಾಟ್.ನಂ.77,78	1339.53 ಚ.ಮೀ	396.51 ಚ.ಮೀ
04	ಬೆಳಗಾಂ	1076	837.20 ಚ.ಮೀ	649.76 ಚ.ಮೀ
05	ಧಾರವಾಡ	ಸಿ.ಟಿ.ಎಸ್.ನಂ.115	1955 ಚ.ಮೀ	465 ಚ.ಮೀ
06	ಶಿವಮೊಗ್ಗ	701/701/1805/1	1071 ಚ.ಮೀ	457.11 ಚ.ಮೀ
07	ತುಮಕೂರು	1926/573	2173.95 ಚ.ಮೀ	260.46 ಚ.ಮೀ
08	ಕೋಲಾರ	334/361	318.14 ಚ.ಮೀ	296.93 ಚ.ಮೀ
09	ಬೀದರ್	8.5.122	1023.25 ಚ.ಮೀ	355.81 ಚ.ಮೀ
10	ಬಳ್ಳಾರಿ	28/1ವಾರ್ಡ್-5 ಬ್ಲಾಕ್-3	3716.12 ಚ.ಮೀ	592.81 ಚ.ಮೀ
11	ಹಾಸನ	347-ಎ	4044 ಚ.ಮೀ	241.44 ಚ.ಮೀ
12	ಬಾಗಲಕೋಟೆ	24/7,8	1026 ಚ.ಮೀ	251.70 ಚ.ಮೀ
13	ವಿಜಯಪುರ	311.ಡಿ.ಎಸ್..01	900.83 ಚ.ಮೀ	364.27 ಚ.ಮೀ
14	ರಾಯಚೂರು	1-1-71/1, 1-1-43/1	1395.34 ಚ.ಮೀ	384.83 ಚ.ಮೀ
16	ಗುಲ್ಬರ್ಗಾ	2-917/1	1157.30 ಚ.ಮೀ	447.02 ಚ.ಮೀ

ಉಪ ಮುಖ್ಯ ವ್ಯವಸ್ಥಾಪಕರು(ಸಾ.ಆ.ವಿಭಾಗ)

'ಆನೆ ಬಂಡಿ' — 21

ಮೈಸೂರು ಮಹಾನಗರ ಪಾಲಿಕೆ, ಮೈಸೂರು

[illegible]

ನಾಗರೀಕ ಸೇವಾ ಕೇಂದ್ರ & ವಲಯ ಕಛೇರಿ -06 [illegible]

[illegible]

ಮೈಸೂರು ದಿನಾಂಕ : 14-06-2018

ಗೆ,

ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು
ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ ಮೈಸೂರು
73/1, ಮಧ್ವೇಶ ಕಾಂಪ್ಲೆಕ್ಸ್
ನಜರ್‌ಬಾದ್ ಮುಖ್ಯ ರಸ್ತೆ, ಮೈಸೂರು

-: ಅನುಮತಿ ಪತ್ರ :-

ವಿಷಯ :- ಶಿಥಿಲವಾಗಿರುವ ಕಟ್ಟಡವನ್ನು ಕೆಡವುದರ ಬಗ್ಗೆ

ಉಲ್ಲೇಖ :-
1. ತಮ್ಮ ಮನವಿ ದಿನಾಂಕ : 07-05-2018
2. ಕಛೇರಿ ಆದೇಶ ದಿನಾಂಕ : 08-06-2018

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ನೀಡಿರುವ ಮನವಿಯನ್ನು ಪರಿಶೀಲಿಸಿ, *ಡೋರ್ ನಂ. 2258, ಡಿ-6, ವಿನೋಬ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು* ರ [illegible] ಕಟ್ಟಡವನ್ನು ತೆರವುಗೊಳಿಸಲು ನಿಗದಿತ ಶುಲ್ಕ ಪಾವತಿಸಿರುವುದರಿಂದ ಈ ಕೆಳಕಂಡ ಷರತ್ತುಗಳೊಂದಿಗೆ ಸದರಿ ಶಿಥಿಲ ಕಟ್ಟಡವನ್ನು ತೆರವುಗೊಳಿಸಲು ಅನುಮತಿಯನ್ನು ನೀಡಿದೆ

ರೂ. 7788.00
ಚಲನ್ ನಂ. 158
ದಿನಾಂಕ : 13-06-2018

ಷರತ್ತುಗಳು

1. ಶಿಥಿಲ ಕಟ್ಟಡವನ್ನು ಸಾರ್ವಜನಿಕರಿಗೆ ಮತ್ತು ಇತರ ಪ್ರಾಣಿಗಳಿಗೆ ಹಾನಿಯಾಗದಂತೆ, ನಿಮ್ಮ ಸ್ವಂತ ಖರ್ಚಿನಿಂದ ತುರ್ತಾಗಿ ತೆರವುಗೊಳಿಸತಕ್ಕದ್ದು
2. ಕಟ್ಟಡವನ್ನು ಕೆಡವಿಸುವಾಗ ಕಟ್ಟಡವು ಖಾಲಿ ಇರುವುದನ್ನು ದೃಢೀಕರಿಸಿಕೊಂಡು ಸಾರ್ವಜನಿಕರಿಗೆ ಅಥವಾ ಸರ್ಕಾರಿ ಹಾಗೂ ನಗರ ಪಾಲಿಕೆಯ ಆಸ್ತಿ ಪಾಸ್ತಿಗೆ ಹಾನಿಯಾಗದಂತೆ ಕ್ರಮ ಕೈಗೊಳ್ಳತಕ್ಕದ್ದು.
3. ಕಟ್ಟಡ ಕೆಡವಿಸಿದ ಮೇಲೆ ಎಲ್ಲಾ ಡೆಬ್ರಿಸ್ ಇತರ ಕಟ್ಟಡಕ್ಕೆ ಸಂಬಂಧಿಸಿದ ಪದಾರ್ಥಗಳನ್ನು ನಗರ ಪಾಲಿಕೆ ಸರಹದ್ದಿನಿಂದ ಹೊರಗಡೆ ನಿಮ್ಮ ಸ್ವಂತ ಜಾಗಕ್ಕೆ ನಿಮ್ಮ ಸ್ವಂತ ಖರ್ಚಿನಿಂದ ಸಾಗಿಸತಕ್ಕದ್ದು.
4. ಯಾವುದೇ [illegible] ಪ್ರಾಣಿಗಳಿಗೆ [illegible] ಸೂಕ್ತ ಪರಿಹಾರವನ್ನು ನೀಡಲು ನೀವೇ ಜವಾಬ್ದಾರರಾಗತಕ್ಕದ್ದು
5. ಈ ಅನುಮತಿಯು ಅನುಮತಿಯ ದಿನಾಂಕದಿಂದ 30 ದಿವಸದವರೆಗೆ ಮಾತ್ರ ಚಾಲ್ತಿಯಲ್ಲಿರುವುದು
6. ಕಟ್ಟಡವನ್ನು ಕೆಡವಿಸುವ ಬಗ್ಗೆ ನ್ಯಾಯಾಲಯದಲ್ಲಿ ಇರಬಹುದಾದ ಅಥವಾ ಉದ್ಭವಿಸಬಹುದಾದ ಯಾವುದೇ ಮೊಕದ್ದಮೆಗೆ ನೀವೇ ಜವಾಬ್ದಾರರಾಗಿರತಕ್ಕದ್ದು.

[illegible]
ವಲಯ ಕಚೇರಿ-05
ಮೈಸೂರು ಮಹಾನಗರ ಪಾಲಿಕೆ
[illegible]

2021.03.30 14:59

ಅನುಬಂಧ-3 ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಶಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿ/ನೌಕರರ ವಿವರಗಳು		
ಕ್ರ.ಸಂ	ಶಾಖೆಗಳ ಹೆಸರು	ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆ
1	ಬೆಂಗಳೂರು	09
2	ಕೋಲಾರ	05
3	ಚಿಕ್ಕಬಳ್ಳಾಪುರ	04
4	ತುಮಕೂರು	09
5	ಚಿತ್ರದುರ್ಗ	06
6	ದಾವಣಗೆರೆ	08
7	ಶಿವಮೊಗ್ಗ	09
8	ಮೈಸೂರು ಮತ್ತು ಚಾಮರಾಜನಗರ	09
9	ಕೊಡಗು	05
10	ಮಂಡ್ಯ	08
11	ಹಾಸನ	05
12	ಚಿಕ್ಕಮಗಳೂರು	07
13	ಮಂಗಳೂರು ಮತ್ತು ಉಡುಪಿ	07
14	ಬೆಳಗಾವಿ	08
15	ವಿಜಯಪುರ	06
16	ಬಾಗಲಕೋಟೆ	08
17	ಧಾರವಾಡ	09
18	ಗದಗ	04
19	ಹಾವೇರಿ	04
20	ಶಿರಸಿ	06
21	ಕಲಬುರ್ಗಿ	08
22	ರಾಯಚೂರು	09
23	ಕೊಪ್ಪಳ	07
24	ಬೀದರ್	07
25	ಬಳ್ಳಾರಿ	07
	ಒಟ್ಟು	174

ಉಪ ಮುಖ್ಯ ವ್ಯವಸ್ಥಾಪಕರು(ಮಾಸಂಅ)

ಅನುಬಂಧ-4

ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧಿಕಾರಿ/ನೌಕರರ ಮೇಲಿನ ವಿಚಾರಣೆಯ ವಿವರಗಳು

ಕ್ರ.ಸಂ	ಕಡತ ಸಂಖ್ಯೆ	ಶಿಸ್ತು ಪ್ರಕರಣಗಳ ವಿವರ
1	ಬಿಎನ್‌ಜಿ-248	ಶ್ರೀ ಕಾಮಂತ್ ಎಸ್ ನಾಯ್ಕ, ಅಭಿವೃದ್ಧಿ ಅಧಿಕಾರಿ, ತುಮಕೂರು ಶಾಖೆ, ಹಾಲಿ ಕೋಲಾರ ಶಾಖೆ ಇವರು ಸುಳ್ಳು ವೈದ್ಯಕೀಯ ವೆಚ್ಚ ಮನರ್ಭರಣಕ್ಕೆ ಕ್ಲೇಂ ಸಲ್ಲಿಸಿರುವ ಕುರಿತು ವಿಚಾರಣಾದೇಶ ಹೊರಡಿಸಲಾಗಿದೆ. ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ವಿಚಾರಣಾ ವರದಿಯಂತೆ ಸಾಬೀತಾದ ಆರೋಪಗಳ ಬಗ್ಗೆ ಆರೋಪಿತ ನೌಕರರಿಂದ ಅಂತಿಮ ರಕ್ಷಣಾ ಹೇಳಿಕೆಯನ್ನು ಪಡೆಯಲಾಗಿದ್ದು, ಆರೋಪಿತ ನೌಕರರು ಸಲ್ಲಿಸಿರುವ ಅಂತಿಮ ರಕ್ಷಣಾ ಹೇಳಿಕೆಯನ್ನು, ವಿಚಾರಣಾಧಿಕಾರಿಗಳು ನೀಡಿರುವ ವರದಿಯ ವಿವರಗಳನ್ನು ಬ್ಯಾಂಕಿನ ಉಪ ನಿಯಮ 52 (ಎ) (ಜೆ) ರಂತೆ ಶಿಸ್ತು ಪ್ರಾಧಿಕಾರವಾದ ಬ್ಯಾಂಕಿನ ಆಡಳಿತ ಮಂಡಳಿ ಸಭೆಗೆ ಪರಿಶೀಲನೆಗೆ ಹಾಗು ಮುಂದೆ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ನಿರ್ಣಯಕ್ಕೆ ವಿಷಯವನ್ನು ಮಂಡಿಸಲು ಕ್ರಮವಿಡಲಾಗಿದೆ.
2	ಬಿಎನ್‌ಜಿ-256	ಶ್ರೀ ಬಿ.ಜಿ.ಕೊಟ್ರೇಶಪ್ಪ, ನಿವೃತ್ತ ಜಿಲ್ಲಾ ವ್ಯವಸ್ಥಾಪಕರು, ತುಮಕೂರು ಶಾಖೆ ಇವರ ಕಾರ್ಯ ನಿರ್ವಹಣೆಯಲ್ಲಿ ಕರ್ತವ್ಯಲೋಪ, ಕರ್ತವ್ಯ ಭ್ರಷ್ಟತೆ, ಅವ್ಯವಹಾರ ಮುಚ್ಚಿಟ್ಟಿರುವುದು ಇತ್ಯಾದಿ ಕುರಿತು ವಿಚಾರಣೆಗೆ ಆದೇಶಿಸಲಾಗಿದ್ದು, ವಿಚಾರಣೆಯು ಪ್ರಗತಿಯಲ್ಲಿರುವಾಗ ಆರೋಪಿತ ನೌಕರರು ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿರುವುದನ್ನು ಬ್ಯಾಂಕಿನ ಉಪ ನಿಯಮ 52 (ಎ) (ಜೆ) ರಂತೆ ಶಿಸ್ತು ಪ್ರಾಧಿಕಾರವಾದ ಬ್ಯಾಂಕಿನ ಆಡಳಿತ ಮಂಡಳಿ ಸಭೆಗೆ ಗಮನಕ್ಕೆ ತರಲಾಗಿರುತ್ತದೆ.
3	ಬಿಎನ್‌ಜಿ-257	ಶ್ರೀಮತಿ ಅನುಪಮ.ಎನ್.ಕೆ.ಅಭಿವೃದ್ಧಿ ಅಧಿಕಾರಿ, ತುಮಕೂರು ಶಾಖೆ, ಹಾಲಿ ಪ್ರಭಾರ ಮುಖ್ಯ ವ್ಯವಸ್ಥಾಪಕರು, ವಸೂಲಿ ವಿಭಾಗ, ಕೇಂದ್ರ ಕಛೇರಿ ಇವರ ಕಾರ್ಯ ನಿರ್ವಹಣೆಯಲ್ಲಿ ಎಸಗಿರುವ ಕರ್ತವ್ಯಲೋಪ ಇತ್ಯಾದಿ ಕುರಿತು ವಿಚಾರಣೆಗೆ ಆದೇಶಿಸಲಾಗಿದ್ದು, ವಿಚಾರಣೆಯು ಪ್ರಗತಿಯಲ್ಲಿರುತ್ತದೆ.
4	ಬಿಎನ್‌ಜಿ-258	ಶ್ರೀ ಕಾಮಂತ್ ಎಸ್ ನಾಯ್ಕ, ಅಭಿವೃದ್ಧಿ ಅಧಿಕಾರಿ, ತುಮಕೂರು ಶಾಖೆ, ಹಾಲಿ ಕೋಲಾರ ಶಾಖೆ ಇವರು ಕಛೇರಿ ಕೆಲಸ ಕಾರ್ಯದಲ್ಲಿ ನಿರ್ಲಕ್ಷತೆ ಮತ್ತು ಅಸಭ್ಯ ವರ್ತನೆ ಬಗ್ಗೆ ವಿಚಾರಣಾದೇಶ ಹೊರಡಿಸಲಾಗಿದೆ. ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ವಿಚಾರಣಾ ವರದಿಯಂತೆ ಸಾಬೀತಾದ ಆರೋಪಗಳ ಬಗ್ಗೆ ಆರೋಪಿತ ನೌಕರರಿಂದ ಅಂತಿಮ ರಕ್ಷಣಾ ಹೇಳಿಕೆಯನ್ನು ಪಡೆಯಲಾಗಿದ್ದು, ಆರೋಪಿತ ನೌಕರರು ಸಲ್ಲಿಸಿರುವ ಅಂತಿಮ ರಕ್ಷಣಾ ಹೇಳಿಕೆಯನ್ನು, ವಿಚಾರಣಾಧಿಕಾರಿಗಳು ನೀಡಿರುವ ವರದಿಯ ವಿವರಗಳನ್ನು ಬ್ಯಾಂಕಿನ ಉಪ ನಿಯಮ 52 (ಎ) (ಜೆ) ರಂತೆ ಶಿಸ್ತು ಪ್ರಾಧಿಕಾರವಾದ ಬ್ಯಾಂಕಿನ ಆಡಳಿತ ಮಂಡಳಿ ಸಭೆಗೆ ಪರಿಶೀಲನೆಗೆ ಹಾಗು ಮುಂದೆ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ನಿರ್ಣಯಕ್ಕೆ ವಿಷಯವನ್ನು ಮಂಡಿಸಲು ಕ್ರಮವಿಡಲಾಗಿದೆ.

5	ಜಿಎಲ್‌ಬಿ-64	ಶ್ರೀ ಕಾಮಂತ್ ಎಸ್ ನಾಯ್ಕ, ಅಭಿವೃದ್ಧಿ ಅಧಿಕಾರಿ, ರಾಯಚೂರು ಶಾಖೆ, ಹಾಲಿ ಕೋಲಾರ ಶಾಖೆ ಇವರ ದುರ್ವರ್ತನೆ ಬಗ್ಗೆ ವಿಚಾರಣಾದೇಶ ಹೊರಡಿಸಲಾಗಿದೆ. ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ವಿಚಾರಣಾ ವರದಿಯಂತೆ ಸಾಬೀತಾದ ಆರೋಪಗಳ ಬಗ್ಗೆ ಅರೋಪಿತ ನೌಕರರಿಂದ ಅಂತಿಮ ರಕ್ಷಣಾ ಹೇಳಿಕೆಯನ್ನು ಪಡೆಯಲಾಗಿದ್ದು, ಆರೋಪಿತ ನೌಕರರು ಸಲ್ಲಿಸಿರುವ ಅಂತಿಮ ರಕ್ಷಣಾ ಹೇಳಿಕೆಯನ್ನು, ವಿಚಾರಣಾಧಿಕಾರಿಗಳು ನೀಡಿರುವ ವರದಿಯ ವಿವರಗಳನ್ನು ಬ್ಯಾಂಕಿನ ಉಪ ನಿಯಮ 52 (ಎ) (ಜೆ) ರಂತೆ ಶಿಸ್ತು ಪ್ರಾಧಿಕಾರವಾದ ಬ್ಯಾಂಕಿನ ಆಡಳಿತ ಮಂಡಳಿ ಸಭೆಗೆ ಪರಿಶೀಲನೆಗೆ ಹಾಗು ಮುಂದೆ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ನಿರ್ಣಯಕ್ಕೆ ವಿಷಯವನ್ನು ಮಂಡಿಸಲು ಕ್ರಮವಿಡಲಾಗಿದೆ.
6	ಜಿಎಲ್‌ಬಿ-65	ಶ್ರೀ ವಜೀಹುದ್ದೀನ್ ಫಹದ್, ಜವಾನರು, ಕಲಬುರ್ಗಿ ಶಾಖೆ, ಹಾಲಿ ಮಡಿಕೇರಿ ಶಾಖೆ ಇವರು ಕಛೇರಿ ಕೆಲಸಕ್ಕೆ ಅನಧಿಕೃತ ಗೈರುಹಾಜರಿ ಹಾಗು ಕರ್ತವ್ಯದಲ್ಲಿ ನಿರ್ಲಕ್ಷತೆ ತೋರುತ್ತಿರುವ ಬಗ್ಗೆ ವಿಚಾರಣಾದೇಶ ಹೊರಡಿಸಲಾಗಿದೆ. ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ವಿಚಾರಣಾ ವರದಿಯಂತೆ ಸಾಬೀತಾದ ಆರೋಪಗಳ ಬಗ್ಗೆ ಅರೋಪಿತ ನೌಕರರಿಂದ ಅಂತಿಮ ರಕ್ಷಣಾ ಹೇಳಿಕೆಯನ್ನು ಪಡೆಯಲಾಗಿದ್ದು, ಆರೋಪಿತ ನೌಕರರು ಸಲ್ಲಿಸಿರುವ ಅಂತಿಮ ರಕ್ಷಣಾ ಹೇಳಿಕೆಯನ್ನು, ವಿಚಾರಣಾಧಿಕಾರಿಗಳು ನೀಡಿರುವ ವರದಿಯ ವಿವರಗಳನ್ನು ಬ್ಯಾಂಕಿನ ಉಪ ನಿಯಮ 52 (ಎ) (ಜೆ) ರಂತೆ ಶಿಸ್ತು ಪ್ರಾಧಿಕಾರವಾದ ಬ್ಯಾಂಕಿನ ಆಡಳಿತ ಮಂಡಳಿ ಸಭೆಗೆ ಪರಿಶೀಲನೆಗೆ ಹಾಗು ಮುಂದೆ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ನಿರ್ಣಯಕ್ಕೆ ವಿಷಯವನ್ನು ಮಂಡಿಸಲು ಕ್ರಮವಿಡಲಾಗಿದೆ.

ಉಪ ಮುಖ್ಯ ವ್ಯವಸ್ಥಾಪಕರು(ಮಾಸಂಅ)